# ಶ್ರೀ ಸುತ್ತೂರು ಮಠ (ಮೈಸೂರು ಶಾಖೆ)

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 233

## ಡಿಜಿಟಲ್ ಮಾಧ್ಯಮ

**22 ಆಗಸ್ಟ್ 2021 * ಭಾನುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

## ಹಿಂದೂಸ್ತಾನಿ ಗಾಯನ



ಪಂ. ಅನಿರುದ್ಧ್ ಐತಾಳ್



ಹಾರ್ಮೋನಿಯಂ

ಪಂ. ತೇಜಸ್ ಆರ್. ಕಾಟೋಟಿ



ತಬಲ

ಪಂ. ಕಿರಣ್ ಯಾವಗಲ್

ಆನ್‌ಲೈನ್ ಮೂಲಕ ನೇರವಾಗಿ ವೀಕ್ಷಿಸಲು ಸರ್ವರಿಗೂ ಹಾರ್ದಿಕ ಸ್ವಾಗತ

YouTube http://Youtube.com/c/JSSMahavidyapeethaonline

f LIVE https://www.facebook.com/JSSMVP

LIVE STREAMING

**ಪಂ. ಅನಿರುದ್ಧ್ ಐತಾಳ್‌ರವರು** ಉದಯೋನ್ಮುಖ ಹಿಂದೂಸ್ತಾನಿ ಗಾಯಕರು. ಇಂಜಿನಿಯರ್ ಪದವೀಧರರು, ಸಂಗೀತದತ್ತ ಅದಮ್ಯ ಆಕರ್ಷಣೆ ಹೊಂದಿದವರು. ಆತ್ಮವಿಶ್ವಾಸ ಮತ್ತು ಪಾಂಡಿತ್ಯಗಳಿಂದ ಮಿಂಚುವ ಆಧುನಿಕ ಯುವಜನತೆಯ ಸಂಕೇತದಂತಿದ್ದಾರೆ. ಪೋಷಕರು ಬಾಲ್ಯದಲ್ಲೇ ಇವರ ಪ್ರತಿಭೆಯನ್ನು ಗುರುತಿಸಿ ಕಲಿಕೆಗೆ ಸೂಕ್ತ ಅವಕಾಶ ಕಲ್ಪಿಸಿದರು. ಶ್ರೀಮತಿ ಗೀತಾ ಗರುಡ ಪೃಥ್ವೀರಾಜರವರ ಬಳಿ ಎಂಟು ವರ್ಷಗಳ ಸತತ ಅಭ್ಯಾಸ ಮಾಡಿದರು. ಅನಂತರ ಡಾ. ಅಶೋಕ್ ಹುಗ್ಗಣ್ಣವರ್‌ರವರ ಬಳಿ ಉನ್ನತ ಸಂಗೀತ ಶಿಕ್ಷಣ ಪಡೆದರು. ತಾಂತ್ರಿಕ ಪ್ರಬುದ್ಧತೆ ಮತ್ತು ಸಂಗೀತ ಮಾಧುರ್ಯ ಇವರ ಹಾಡುಗಾರಿಕೆಯ ಪ್ರಧಾನ ಲಕ್ಷಣಗಳು. ಆಕಾಶವಾಣಿ ಸಂಗೀತ ಸ್ಪರ್ಧೆ ಮತ್ತು ಯುವಜನ ಮೇಳ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾರೆ. ಕೇಂದ್ರ ಸರ್ಕಾರದ ಪ್ರತಿಭಾ ವಿದ್ಯಾರ್ಥಿವೇತನಕ್ಕೆ ಆಯ್ಕೆ. ದಾಸರ ಪದಗಳು, ವಚನಗಳು, ತತ್ವಪದಗಳು, ರಂಗಸಂಗೀತ ಪ್ರಸ್ತುತಿಯಲ್ಲಿ ಅಪಾರ ಸಾಧನೆ.

**ಪಂ. ತೇಜಸ್ ಆರ್. ಕಾಟೋಟಿಯವರು** ಪಂ. ರಾಮಭಾವು ಬಿಜಾಪುರೆಯವರಲ್ಲಿ ಹಾರ್ಮೋನಿಯಂ ವಾದನ ಕಲಿಕೆ ಪ್ರಾರಂಭಿಸಿದರು. ಪ್ರಸ್ತುತ ತಂದೆ ವಿದ್ವಾನ್ ಡಾ. ರವೀಂದ್ರ ಜಿ. ಕಾಟೋಟಿಯವರಲ್ಲಿ ಅಭ್ಯಾಸ ಮುಂದುವರಿಸಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಪದವಿ ಅಧ್ಯಯನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಪ್ರತಿಭಾ ವಿದ್ಯಾರ್ಥಿವೇತನ ಪುರಸ್ಕೃತರಾಗಿದ್ದಾರೆ. ಆಕಾಶವಾಣಿಯ ಬಿ-ಹೈ ಶ್ರೇಣಿ ಕಲಾವಿದರು.

**ಪಂ. ಕಿರಣ್ ಯಾವಗಲ್‌ರವರು** ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದವರು. ನಾಲ್ಕನೆಯ ವರ್ಷದಿಂದಲೇ ತಂದೆ ಪಂ. ರವೀಂದ್ರ ಯಾವಗಲ್‌ರವರ ಬಳಿ ತಬಲ ವಾದನ ಕಲಿಕೆ ಆರಂಭಿಸಿದರು. ಅನಂತರ ಶ್ರೀ ಕಾಳಿದಾಸ ಬಣಕಾರ್, ಶ್ರೀ ಉದಯಕುಮಾರ್ ಕರ್ಪೂರ್, ಶ್ರೀ ಎಂ. ನಾಗೇಶ್ ಮತ್ತು ಪಂ. ಶೇಷಗಿರಿ ಹಾನಗಲ್‌ರವರ ಬಳಿ ಶಿಷ್ಯವೃತ್ತಿ. ಪ್ರಸ್ತುತ ಪಂ. ಯೋಗೇಶ್ ಸಂಶಿಯವರಲ್ಲಿ ವಿಶೇಷ ತರಬೇತಿ ಪಡೆಯುತ್ತಿದ್ದಾರೆ. ಪಂ. ಹರಿಪ್ರಸಾದ್ ಚೌರಾಸಿಯಾ, ಪಂ. ಪ್ರವೀಣ್ ಗೋಡ್ಖಿಂಡಿ ಮುಂತಾದ ಸಂಗೀತ ದಿಗ್ಗಜರಿಗೆ ಸಾಥ್ ನೀಡಿದ್ದಾರೆ. ಕರ್ನಾಟಕ ಸಂಗೀತ ಶಿಕ್ಷಣ ಮಂಡಳಿಯ ಸೀನಿಯರ್ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣರಾಗಿದ್ದಾರೆ. ಅಸಂಖ್ಯಾತ ಪ್ರತಿಷ್ಠಿತ ಕಛೇರಿಗಳಲ್ಲಿ ಪಾಲ್ಗೊಂಡಿದ್ದಾರೆ. ಹಲವಾರು ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

# ಬೆಳದಿಂಗಳ ಸಂಗೀತ 234

## 20 ಸೆಪ್ಟೆಂಬರ್ 2021



**ಗಾಯನ**

**ವಿದುಷಿ ವಾರಿಜಾಶ್ರೀ ವೇಣುಗೋಪಾಲ್**

**ವಯೊಲಿನ್**

**ವಿದ್ವಾನ್ ಮತ್ತೂರು ಶ್ರೀನಿಧಿ**





**ಮೃದಂಗ**

**ವಿದ್ವಾನ್ ಬಿ.ಸಿ. ಮಂಜುನಾಥ್**

ಫೋನ್: 0821–2548221, 2548223 * ಇಮೇಲ್: sutturmath@jssonline.org